

ನಂತರವೇ ನಾಟಕ ಶುರು ಆಗುತ್ತದೆ.

ನಾಟಕ ಮುಗಿಯುವುದು ಕೂಡ ಬೆಳಗಿನ ಜಾವದಲ್ಲೆ. ನಂತರ ಅವರು ಪುನಃ ಎದ್ದು ಮುಖ ತೊಳೆದು ತಮ್ಮೂರಿನ ಕಡೆಗೆ ಮತ್ತೆ ನಡಿಗೆ ಆರಂಭಿಸಿ ತಲುಪುತ್ತಾರೆ. ನಾಟಕ ಶುರುವಾಗುವ ಹೊತ್ತಿಗೆ ಜನ ಒಟ್ಟಿಗೆ ಅಪರೂಪಕ್ಕೆ ಸೇರಿದ್ದು ನೋಡಿ ಪಕ್ಷಿಗಳೆಲ್ಲ ನಿಧಾನ ಮರದ ಒಳಗೆ ಸೇರಿಕೊಳ್ಳುತ್ತವೆ. ಎಲ್ಲರ ಮನೆಯ ಮುಂಬಾಗಿಲಿನಲ್ಲಿ ಬೆಳಿಗ್ಗೆಯೆ ಎದ್ದು ಕುಳಿತ ರಂಗೋಲಿಗಳು ನಾಟಕದ ನಟಿಯ ನೋಡಿ ಕಳ್ಳ ಖುಷಿ ಅನುಭವಿಸುತ್ತಿವೆ. ಅಣಶಿ ರಸ್ತೆಯಲ್ಲಿ ಜನರ ಓಡಾಟ ಹೆಚ್ಚಾದ ಕಾರಣ ರಸ್ತೆಗೂ ಒಂದು ನಮೂನಿ ಸುಖ. ಹೋಗಿ ಬರುವವರ ಮಾತು ಆಲಿಸುವ ಭಾಗ್ಯ ಆ ದಿನ ರಸ್ತೆಗೆ ಒದಗುತ್ತದೆ. ಇತ್ತ ತಾಮಡೋ ಮಾಮನ ಅಂಗಡಿ ನಾಟಕದ ದಿನದ ಬೆಳಿಗ್ಗೆಯಿಂದಲೇ ಮುಖ ಮುಚ್ಚಿ ಕೂತಿದೆ. ನಾಟಕ ಸಮಯಕ್ಕೆ ಸರಿಯಾಗಿ ತೆರೆದುಕೊಳ್ಳಲು ಅದು ಕೂಡ ಒಂದಿಷ್ಟು ತಯಾರಿ ಮಾಡಿಕೊಂಡಿದೆ. ವರ್ಷಕ್ಕೊಂದು ಬಾರಿ ತಾಮಡೋ ಮಾಮನ ಅಂಗಡಿ ಎದುರಿಗಿರುವ ಎರಡು ಊಟದ ಟೇಬಲ್ಲು ಹಾಗೂ ಕುರ್ಚಿಗಳು ಇಂದು ಸ್ನಾನ ಮಾಡುತ್ತವೆ. ಅಂಗಡಿ ಮುಂದಿನ ಅಂಗಳ ಸಗಣಿ ಸಾರಿಸಿಕೊಂಡು, ರಂಗೋಲಿ ಹೊದ್ದಿದೆ. ಬೆಳಿಗ್ಗೆಯಿಂದ ಸಾಮಾನುಗಳೆಲ್ಲ ಸರಿಯಾಗಿ ಜೋಡಿಸಿಕೊಂಡು ಸಂಜೆ ಏಳರ ಹೊತ್ತಿಗೆ ಜನ ಬರುವಾಗ ಮತ್ತೆ ತನ್ನ ಮುಖ ಹೊಸದಾಗಿ ತೆರೆಯುತ್ತದೆ. ಅಂಬಾಳಿ ಊರಿನಿಂದ ತಂದ ಧೂಪದ ಚಕ್ಕೆ ಆ ರಾತ್ರಿ ಸಣ್ಣ ಉರಿದು ಸುತ್ತ ಪರಿಮಳ ಬೀರಿದೆ. ರಾತ್ರಿ ದಾಂಡೇಲಿ ಕಾಗದ ಕಾರ್ಖಾನೆಗೆ ನಾಟು ಒಯ್ಯುವ ತಾಯಿಯೇ ದೇವರು ಎಂದು ಹೆಸರು ಹೊತ್ತ ಲಾರಿ ಎಂದಿನಂತೆ ತಾಮಡೋ ಮಾಮನ ಅಂಗಡಿ ಎದುರು ಬಂದು ನಿಂತಿದೆ. ವಾರಕ್ಕೆರಡು ಬಾರಿ ಅಣಶಿ ಮಾರ್ಗವಾಗಿ ಹೋಗುವ ಈ ಲಾರಿಯ ಚಾಲಕ ಅಣಶಿ ಘಟ್ಟ ಹತ್ತಿ ಬಂದ ಬೇಸರಿಕೆ ಕಳೆಯಲು ಸಿಂಗಲ್ ಚಾ ಕುಡಿಯುವುದು ತಾಮಡೋ ಅಂಗಡಿಯಲ್ಲಿ. ಇಂದು ಅಂಗಡಿ ವಿಶೇಷವಾಗಿ ಅಲಂಕರಿಸಿಕೊಂಡದ್ದನ್ನು ಕಂಡು ಏನೆಂದು ವಿಚಾರಿಸಿದ್ದಾನೆ. 'ಅರೇ, ಆಜ್ ಹಮ್ಗಿಲೆ ಜಾತ್ರಾ ನೂ.. ನಾಟ್ಕಾ ಬಿ ಆಸಾ. ನಟಿ ಸಗ್ಳಿ ಆಯ್ಲಾ.. ತು ಫಳೂನ್ ವೋಚ್' ಎಂದು ಆಹ್ವಾನ ನೀಡಿದ್ದಾನೆ. ನಟಿ ಹೆಸರು ಕೇಳಿದ ಕೂಡಲೆ ಚಾಲಕನಿಗೆ ಕಿವಿ ಚುರುಕಾಗಿ ಬುದ್ಧಿ ಇರು ಎಂದು ಬಿಟ್ಟಿದೆ. ನಾಟ್ಕ ಚೂರು ನೋಡಿಯೇ ಬೆಳಿಗ್ಗಿನವರೆಗೆ ಹೇಗೂ ದಾಂಡೇಲಿ ಮುಟ್ಟಿದರಾಯಿತು ಎಂದು ಲೆಕ್ಕ ಹಾಕಿದ್ದಾನೆ. ಆಗಾಗ ಸಿಗುವ ಪೇಪರ್ ಗಾಡಿಯವನು ಕೂಡ ಸ್ವಲ್ಪ ಸಮಯದಲ್ಲಿ ಅವನ ಜೊತೆಯಾಗಿದ್ದಾನೆ. ಅಂವ ಕಾರವಾರದಿಂದ ದಾಂಡೇಲಿಗೆ ಪೇಪರ್ ಒಯ್ಯಲು ದಾಂಡೇಲಿ ಕಡೆಗಿಂದ ಬಂದಿದ್ದಾನೆ. ಘಟ್ಟದ ದಾರಿ ಇಳಿಯುವಾಗ ಆಗಾಗ ಇಬ್ಬರ ಗಾಡಿಗಳು ಎದುರಾಗಿ ಒಂದು ಹಾರ್ನ ಹಾಕಿ ಹಾಯ್ ಹೇಳುವುದರ ಮೂಲಕ ಆದ ಅವರ ಪರಿಚಯ ಇಂದು ಎದುರು ಬದುರಾಗಿ ಕಂಡು ಮಾತಾಡಿವೆ. ಇಬ್ಬರ ಕೈಗೂ ಬೈ ಟೂ ಚಾ ಸಾಥಿಕೊಟ್ಟಿದೆ. ಕತ್ತಲ ನೆರಳಲ್ಲಿ ಚಾಲಕನಿಗೆ ಟೇಬಲ್ ತುದಿಗೆ ಕುಳಿತ ಮುಖ ಎಲ್ಲೋ ನೋಡಿದಂತಿದೆ. ಅಣಶಿಯಿಂದ ನಾಲ್ಕು ಕಿ.ಮೀ. ದೂರವಿರು ನಿಗುಂಡಿಯ ರಾಜಕುಮಾರ ಕಂಡಿದ್ದಾನೆ. ಹಳ್ಳಿ ಹೈದ ಪ್ಯಾಟೆಗೆ ಬಂದ ಖ್ಯಾತಿಯ ರಾಜಕುಮಾರನ ಪರಿಚಯ ಚಾಲಕನಿಗೆ ಹತ್ತಿ ಅಗ್ದಿ ಖುಷಿಯಾಗಿ ಮಾತಾಡಿದ್ದಾನೆ. ರಾಜಕುಮಾರ ಅಣಶಿ ನಾಟ್ಕ ನೋಡಲು ಬರುವುದನ್ನು ಎಂದು ತಪ್ಪಿಸುವುದಿಲ್ಲ. ಚಾಲಕ ತತಕ್ಷಣ ಮೊಬೈಲಿನ ಫ್ರಂಟ್ ಕ್ಯಾಮೆರಾ ತೆಗೆದು ಸೆಲ್ಫಿ ಪಡೆದಿದ್ದಾನೆ. ' ಅತ್ತಾ ತೆಕಾ ಕಾಯ್ ಕಾಮ್ ನಾ. ಏಕ್ ಪಾಟಿ ಟಿ.ವಿರ ಆಯ್ಲೋ. ಜಾಲ್ಲೆ..ಅತ್ತಾ ಕೋಣ್ ತೆಜಾ ಬರೋಬರ ವಿಚಾರ ಕರನಾ' ಎಂದು ತಾಮಡೋ ಮಾಮ ರಾಜಕುಮಾರನ ಬಗ್ಗೆ ಕನಿಕರದ ಮಾತಾಡುತ್ತಿದ್ದಾನೆ.

ಊಟವೆಲ್ಲ ಮುಗಿಯುವ ಹೊತ್ತಿಗೆ ಹತ್ತು ಗಂಟೆ ಆಗಿದೆ. ಚಳಿ ಮಾತ್ರ ಆಗಷ್ಟೆ ಎದ್ದ ಹಾಗೆ ತನ್ನ ಇರುವ ತೋರಿಸುತ್ತಿದೆ. ಅಲ್ಲಲ್ಲಿ ಬಿದ್ದ ಜಿಗ್ಗುಗಳನ್ನೆಲ್ಲ ಸೇರಿಸಿ ಬೆಂಕಿ ಹಾಕಿ ಕುಂಡೆ ನೆಲಕ್ಕಿಡದೆ ಕಾಲಿನ ಮೇಲೆ ಕೂತ ಜೀವಗಳು, ಹಾಗೆ ಕೂತೆ ಇಡೀ ನಾಟಕ ನೋಡಿವೆ. ನಾಟಕ ನೋಡುತ್ತ ಕುಳಿತ ಹಕ್ಕಿಗಳಿಗೂ ಈ ದಿನ ಬೆಳಗಾಗಿದ್ದು ಗೊತ್ತೇ ಆಗಲಿಲ್ಲ. ಪೂರ್ತಿ ಬೆಳಗಾಗುವಷ್ಟರಲ್ಲಿ ಅಣಶಿಯಲ್ಲಿ ಮತ್ತೊಂದು ಗುಲ್ಲು ಎಬ್ಬಿದೆ. ರಾತ್ರಿ ನಾಟಕದ ಪಾರ್ಟು ಮಾಡಿದ್ದ ಅಜ್ಜ ಬೆಳಗಾಗುವಷ್ಟರಲ್ಲಿ ನಾಪತ್ತೆ ಆಗಿದ್ದಾನೆ. ತನ್ನ ಪಾರ್ಟು ಮುಗಿದ ತಕ್ಷಣ ಕೈಯಲ್ಲಿ ಬಾಟ್ಲಿ ಹಿಡಿದು ಖುಷಿಯಿಂದ ಕುಡಿಯುತ್ತ ಲಾರಿ ಹಾಗೂ ಪೇಪರ್ ಗಾಡಿ ನಿಂತ ಬಳಿ ಹೋಗುತ್ತಿದ್ದ ನಿಜ, ಆದರೆ ಎಲ್ಲಿ ಹೋದ ಎಂಬುದು ಯಾರಿಗೂ ಗೊತ್ತಿಲ್ಲ. ದಾಂಡೇಲಿ ಬದಿಗೊ..ಕಾರವಾರಕ್ಕೊ.. ಅಜ್ಜ ಹೋಗಿರಬಹುದು ಎಂಬುದು ಒಂದು ಅಂದಾಜು. ಒಮ್ಮೊಮ್ಮೆ ಅತಿ ಮರೆವಿನಿಂದ ತಾನು ಯಾರೆಂದು ಮರೆತು ಹೋಗುವ ಅಜ್ಜ ಗಾಡಿ ಹತ್ತಿ ಹೋಗಿದ್ದಾನೋ.. ಅಥವಾ ಕಾಡಿನೊಳಗೆ ಹೋದನೆ.. ಎಂಬ ಗುಮಾನಿಯೂ ಎದ್ದಿದೆ. ನಾಟಕ ನೋಡಿ ತೂಕಡಿಸುತ್ತಿದ್ದ ಜನ ಎಚ್ಚರವಾಗಿ ಅಲ್ಲಲ್ಲಿ ಹುಡುಕಲು ಶುರುವಾಗಿದ್ದಾರೆ. ಅರಣ್ಯ ಇಲಾಖೆಯ ಗಾರ್ಡು ವಾಚರ್‌ಗಳು ಕಾಡಿನ ಬದಿಗೆ ಹುಡುಕುತ್ತಿದ್ದಾರೆ. ತಾಮಡೋ ಮಾಮನ ಹೊಟೇಲು ಟೇಬಲ್ಲುಗಳ ಮೇಲೆ ಕುರ್ಚಿಗಳನ್ನು ಬೊರಲು ಹಾಕಿ ನೆಲ ತೊಳೆಯುತ್ತಿದ್ದಾನೆ. ಅಟ್ಲಕಾಯಿ ನೊರೆಯ ವಾಸನೆ ಎಲ್ಲರ ಮೂಗಿಗೆ ತಾಗಿದೆ. ಅಜ್ಜ ಎಲ್ಲಿ ಹೋದ ಎಂಬ ಪ್ರಶ್ನೆಯಲ್ಲಿಯೆ ಅಣಶಿ ದೈನಂದಿನ ಕೆಲಸ ಶುರು ಮಡಿದೆ. ಈ ನಡುವೆ ತುಸು ಹರಿದಿದ್ದ ಹವಾಯಿ ಚಪ್ಪಲಿಯ ಜೋಡಿಯೊಂದು ತಾಮಡೋ ಮಾಮನ ಅಂಗಡಿಯ ಮೂಲೆಯಲ್ಲಿ ವ್ಯವಸ್ಥಿತವಾಗಿ ಕೂತಿದೆ.ಆ ಚಪ್ಪಲಿಗಳ ಗುರ್ತು ತಾಮಡೋ ಮಾಮನಿಗೆ ಸಿಕ್ಕಿದೆ. ಚಪ್ಪಲಿ ಇಲ್ಲೆ ಇದೆ ಎಂದ ಮೇಲೆ ಅಜ್ಜ ಇಲ್ಲೆ ಎಲ್ಲೋ ಇದ್ದಾನೆ ಎಂದು ಖುಷಿಯಿಂದ ಚಪ್ಪಲಿ ಹಿಡಿದು ತಾಮಡೋ ಮಾಮ ಅಜ್ಜನ ಮನೆಯ ಹತ್ತಿರ ಓಡಿಯೆ ಹೋಗಿದ್ದಾನೆ. ಇತ್ತ ತಾಮಡೋ ಮಾಮನ ಮನೆಯ ಹಿಂದೆ ಇರುವ ಹಿಟ್ಟಿನ ಗಿರಣಿಯ ತೆರೆದ ಬಾಗಿಲಿನಿಂದ ಆಗಷ್ಟೆ ಎದ್ದು ಆಕಳಿಸುತ್ತ ಅಜ್ಜ ಅಂಗಡಿಯತ್ತಲೇ ಬರುತ್ತಿದ್ದಾನೆ.

ಪ್ರತಿಕ್ರಿಯಿಸಿ:feedback@sudha.co.in